ವ್ಯರ್ಥ ಮತ್ತು ನಕಾರತ್ಮಕತೆಯನ್ನು ತಪ್ಪಿಸಿ ಪ್ರಶಸ್ತಿ ತೆಗೆದುಕೊಳ್ಳುವಂತಹ ಪಾತ್ರರಾಗಿ

ಇಂದು ಬಾಪ್ದಾದಾರವರು ತಮ್ಮ ಪರಮಾತ್ಮನ ಪ್ರೀತಿಯ ಪಾತ್ರ ಆತ್ಮರನ್ನು ನೋಡುತ್ತಿದ್ದಾರೆ. ಪರಮಾತ್ಮ ಪ್ರೀತಿ ಆನಂದಮಯ ಉಯ್ಯಾಲೆಯಾಗಿದೆ ಯಾವುದರಿಂದ ಸುಖದಾಯಿಯ ಉಯ್ಯಾಲೆಯಲ್ಲಿ ಸದಾ ತೂಗುತ್ತಿರುತ್ತಾರೆ. ಪರಮಾತ್ಮನ ಪ್ರೀತಿ ಅನೇಕ ಜನ್ಮಗಳ ದುಃಖಗಳಿಗೆ ಒಂದು ಸೆಕೆಂಡ್ನಲ್ಲಿ ಸಮಾಪ್ತಿ ಮಾಡಿಬಿಡುತ್ತದೆ. ಪರಮಾತ್ಮನ ಪ್ರೀತಿ ಸರ್ವ ಶಕ್ತಿ ಸಂಪನ್ನವಾಗಿದೆ, ಯಾವುದು ನಿರ್ಬಲ ಆತ್ಮರಿಗೆ ಶಕ್ತಿಶಾಲಿಯನ್ನಾಗಿ ಮಾಡಿಬಿಡುತ್ತದೆ. ಇಂತಹ ಶ್ರೇಷ್ಠ ಪರಮಾತ್ಮನ ಪ್ರೀತಿಗೆ ನೀವು ಎಷ್ಟು ಸ್ವಲ್ಪ ಆತ್ಮರೇ ಪಾತ್ರರಾಗಿದ್ದೀರಿ. ಇಂತಹ ಶ್ರೇಷ್ಠ ಪಾತ್ರ ಆತ್ಮರಿಗೆ ಬಾಪ್ದಾದಾರವರು ನೋಡಿ-ನೋಡಿ ಹರ್ಷಿತರಾಗುತ್ತಿದ್ದಾರೆ. ಹೇಗೆ ತಂದೆ ಹರ್ಷಿತರಾಗುತ್ತಾರೆ ಹಾಗೆಯೇ ತಂದೆಯು ಹರ್ಷಿತರಾಗುತ್ತಾರೆ ಆದರೆ ನಂಬರ್ವಾರ್. ಬಾಪ್ದಾದಾರವರು ಪ್ರತಿ ಮಗುವಿಗೆ ಹೃದಯದಿಂದ ವರದಾನ ಕೊಡುತ್ತಾರೆ - ಸದಾ ಪರಮಾತ್ಮನ ಪ್ರೀತಿಯ ಉಯ್ಯಾಲೆಯಲ್ಲಿ ತೂಗುತ್ತಿರುವಂತಹ ಅವಿನಾಶಿ ರತ್ನ ಭವ. ಈ ಪ್ರೀತಿಯ ಉಯ್ಯಾಲೆಯಿಂದ ಮನಸ್ಸು ರೂಪಿ ಕಾಲುಗಳನ್ನು ಕೆಳಗಡೆ ಇಡಬೇಡಿ ಏಕೆಂದರೆ ಇಡೀ ವಿಶ್ವದ ಆತ್ಮರಿಂದ ಪರಮ ಆತ್ಮನಿಗೆ ಮುದ್ದಾಗಿದ್ದೀರಿ, ಪ್ರಿಯರಾಗಿದ್ದೀರಿ. ಆಗ ಬಾಪ್ದಾದಾರವರು ಮಕ್ಕಳಿಗೆ ಆಶೀರ್ವಾದ ಕೊಡುತ್ತಾರೆ ಇದೇ ಪರಮಾತ್ಮನ ಪ್ರೀತಿಯಲ್ಲಿ ಲವಲೀನರಾಗಿರಿ. ಇಂತಹ ಲವಲೀನ ಆತ್ಮರ ಹತ್ತಿರ ಯಾವುದೇ ಪರ-ಸ್ಥಿತಿ ಅಥವಾ ಮಾಯೆಯ ಏರುಪೇರಿನಲ್ಲಿ ಬರಲು ಸಾಧ್ಯವಿಲ್ಲ. ಕೆಳಗಡೆ ಕಾಲು ಇಡುತ್ತೀರಿ ಅಂದಾಗ ಮಾಯೆಯು ಭಿನ್ನ-ಭಿನ್ನ ಆಟ ಆಡಲು ಬರುತ್ತದೆ, ಭಿನ್ನ ಭಿನ್ನ ರೂಪ ಧಾರಣೆ ಮಾಡಿ ಆಕರ್ಷಿತರನ್ನಾಗಿ ಮಾಡುತ್ತದೆ. ಲವಲೀನ ಆತ್ಮರ ಸರ್ವ ಶಕ್ತಿಗಳ ಮುಂದೆ ಮಾಯೆ ಕಣ್ಣು ಎತ್ತಿ ನೋಡಲು ಸಾಧ್ಯವಿಲ್ಲ. ನಿಮ್ಮ ಮೂರನೇ ನೇತ್ರ, ಜ್ವಾಲಾಮುಖಿ ನೇತ್ರ ಮಾಯೆಯನ್ನು ಶಕ್ತಿಹೀನ, ಬಲಹೀನರನ್ನಾಗಿ ಮಾಡಿಬಿಡುತ್ತದೆ. ನೀವೆಲ್ಲರೂ ಯಾರು ವಿಶೇಷ ಆತ್ಮರಿದ್ದೀರಿ, ಎಲ್ಲಾ ಬ್ರಾಹ್ಮಣರಿಗೆ ಬಾಪ್ದಾದಾರವರ ಮೂಲಕ ಮೂರನೇ ನೇತ್ರ ಬಹಳ ಪರಿಶ್ರಮದ ಪುರುಷಾರ್ಥ ಮಾಡುತ್ತ-ಮಾಡುತ್ತ ಸುಸ್ತಾಗಿ ಬಿಡುತ್ತಾರೆ ಮತ್ತು ಸುಸ್ತಾಗುವ ಕಾರಣ ಬಂಧಾಗಿ ಬಿಡುತ್ತದೆ. ಮಾಯೆಯು ಸಹ ನೋಡಲು ಕಣ್ಣು ಬಹಳ ದೂರಾಂದೇಶಿಯದ್ದಾಗಿರಬೇಕು, ದೂರದಿಂದ ನೋಡುತ್ತಾರೆ. ಈಗ ಮಾಯೆಯು ತಿಳಿದುಕೊಂಡಿದೆ - ಈಗ ನಮ್ಮ ರಾಜ್ಯ ಹೋಯಿತೆಂದರೆ ಹೋಯಿತು, ಇದಕ್ಕಾಗಿ ಮಾಯೆಯಿಂದ ಗಾಬರಿಯಾಗಬಾರದು. ಖುಷಿ-ಖುಷಿಯಿಂದ, ಸರ್ವ ಶಕ್ತಿಗಳ ಆಧಾರದಿಂದ ಅವರಿಗೆ ವಿದಾಯಿ(ಬಿಳ್ಕೊಡುಗೆ) ಕೊಡಿ. ಬರುವುದಕ್ಕೆ ಅವಕಾಶ ಕೊಡಬೇಡಿ, ವಿದಾಯಿ(ಬಿಳ್ಕೊಡುಗೆ) ಕೊಡಿ. ಅದು ಸಹ ಬ್ರಾಹ್ಮಣ ಆತ್ಮರಿಂದ, ಶ್ರೇಷ್ಠ ಆತ್ಮರಿಂದ ಯುದ್ಧ ಮಾಡುತ್ತ ಮಾಡುತ್ತ ಸುಸ್ತಾಗಿಬಿಟ್ಟಿದೆ. ನೀವು ಸ್ವಯಂ ಬಲಹೀನರಾಗಿರುವ ಕಾರಣ ಮಾಯೆಯ ಆಹ್ವಾನ ಮಾಡುತ್ತೀರಿ, ಅದು ಸುಸ್ತಾಗಿಬಿಟ್ಟಿದೆ ಆದರೆ ನೀವು ಆಹ್ವಾನೆ ಮಾಡುತ್ತೀರಿ ಅಂದಾಗ ಅದು ಅವಕಾಶವನ್ನು ತೆಗೆದುಕೊಳ್ಳುತ್ತದೆ. ಈಗ ಶಕ್ತಿಹೀನವಾಗಿ ಬಿಟ್ಟಿದೆ. ನಿಮ್ಮೆಲ್ಲರ ಅನುಭವ ಏನು ಹೇಳುತ್ತೀರಿ? ಈಗ ಮಾಯೆಯಲ್ಲಿ ಮೊದಲಿನ ತರಹ ಶಕ್ತಿಯಿದೆಯೇ? ಅದರಲ್ಲಿ ಶಕ್ತಿಯಿದೆಯೇ ಅಥವಾ ನೀವು ಶಕ್ತಿಶಾಲಿಯಾಗಿದ್ದೀರಾ? ಅದು ಟ್ರಾಯಲ್ ಮಾಡುತ್ತದೆ ಏಕೆಂದರೆ ನೀವೇ ಆಹ್ವಾನ ಮಾಡುತ್ತೀರೆಂದಾಗ ಅದು ಏಕೆ ಅವಕಾಶ ಕೊಡುವುದಿಲ್ಲ. ಏಕೆ ಬಲಹೀನರಾಗುತ್ತೀರಿ? ತಂದೆಯ ಪ್ರಶ್ನೆಯಾಗಿದೆ - ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಾ ಅಥವ ಇಲ್ಲವೋ? ಎಲ್ಲರೂ ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಾ? ಕೆಲ-ಕೆಲವೊಮ್ಮೆ ಸರ್ವಶಕ್ತಿವಂತರಾಗಿದ್ದೀರಾ ಅಥವಾ ಸದಾ ಸರ್ವಶಕ್ತಿವಂತರಾಗಿದ್ದೀರಾ? ಏನಾಗಿದ್ದೀರಾ? ಸದಾ ಶಕ್ತಿಶಾಲಿಯಾಗಿದ್ದೀರಾ? ಮಾಯೆಗೆ ಹೇಳುವುದೇ ಈಗ ಹೋಗು ಎಂದು? ನೀವು ಅದನ್ನು ಕರೆಯಬೇಡಿ. ತಂದೆಯು ಮಾಯೆಗೆ ಹೇಳುತ್ತಾರೆ – ಈಗ ಸಮಾಪ್ತಿ ಮಾಡಿ. ಮಾಯೆ ತಂದೆಗೆ ಹೇಳುತ್ತದೆ - ನನ್ನನ್ನು ಆಹ್ವಾನೆ ಮಾಡುತ್ತಾರೆ. ಅಂದಾಗ ತಂದೆ ಏನು ಮಾಡುವರು? ಒಂದುವೇಳೆ ಯಾವುದೇ ಪ್ರಕಾರದ ಬಲಹೀನತೆ ಮನಸ್ಸಿನಲ್ಲಿ, ವಚನದಲ್ಲಿ, ಸಂಬಂಧ-ಸಂಪರ್ಕದಲ್ಲಿ ಬರುತ್ತದೆಯೆಂದರೆ ತಿಳಿದುಕೊಳ್ಳಿ ಮಾಯೆಯನ್ನು ಆಹ್ವಾನೆ ಮಾಡಿದ್ದೀರಿ. ಅದಕ್ಕೂ ಸಹ ಆಹ್ವಾನೆಯ ಪ್ರಕಂಪನಗಳು ಬಹಳ ಬೇಗನೆ ತಲುಪುತ್ತದೆ.

ಈ ಮಹಾ ಉತ್ಸವವಂತು ಬಹಳ ಚೆನ್ನಾಗಿ ಆಚರಿಸುತ್ತಿದ್ದೀರಿ. ಆದರೆ ಉತ್ಸಾಹ ಸದಾ ಇರಲಿ ಇದಕ್ಕಾಗಿ ಉತ್ಸವವನ್ನು ಆಚರಿಸುತ್ತೀರಿ. ಈ ವರ್ಷ ಬಹಳ ಉತ್ಸವಗಳನ್ನು ಆಚರಿಸುತ್ತೀದ್ದೀರಿರಲ್ಲವೇ? (ಈ ಗ್ರೂಪ್ನಲ್ಲಿ ಈಶ್ವರೀಯ ಸೇವೆಯ ಆದಿ ರತ್ನ ಸಮಾರೋಹ ಮತ್ತು ಟೀಚರ್ ಸಹೋದರಿಯರ ಸಿಲ್ವರ್ ಜೂಬಲಿಯ ಕಾರ್ಯಕ್ರಮ ಇಟ್ಟುಕೊಳ್ಳಲಾಗಿದೆ) ಈ ಗ್ರೂಪ್ನಲ್ಲಿ ಉತ್ಸವ ಆಚರಿಸುತ್ತೀದ್ದೀರಿ ಅಂದಾಗ ತಂದೆಯು ತಿಳಿದುಕೊಳ್ಳುತ್ತಾರೆ ಈ ವರ್ಷ ಉತ್ಸವ ಆಚರಿಸುವುದು ಅರ್ಥಾತ್ ಮಾಯೆಗೆ ವಿದಾಯಿ(ಬಿಳ್ಕೊಡುಗೆ) ಕೊಡಿ. ಈ ರೀತಿಯಲ್ಲ ಗೋಲ್ಡನ್ ಚುನ್ನಿ ಧರಿಸಿ ಕುಳಿತು ಬಿಡುವುದು, ಗೋಲ್ಡನ್ ಚುನ್ನಿ ಧರಿಸುವುದು ಎಂದರೆ ಗೋಲ್ಡನ್ (ಸ್ವರ್ಣಿಮ) ಯುಗ ಆಗುವುದು. ದೃಶ್ಯವಂತು ಬಹಳ ಚೆನ್ನಾಗಿ ಎನಿಸುತ್ತದೆ ಆದರೆ ಸದಾ ಗೋಲ್ಡನ್ ಸ್ಥಿತಿಯ ಚುನ್ನಿ ಅಥವಾ ದುಪಟ್ಟಾ ಇರಲಿ. ಈ ರೀತಿ ದುಪಟ್ಟಾ ಇಳಿಸಿ, ಉತ್ಸವ ಪೂರ್ಣವಾಯಿತು ಮತ್ತು ಹೇಗೆ ಇದ್ದರು ಹಾಗೆಯೇ ಇರಿ. ಇದು ಉತ್ಸವ ತರಿಸುವಂತಹ ಕಾರ್ಯಕ್ರಮವಾಗಿದೆ. ಯಾರು ಉತ್ಸವವನ್ನು ಆಚರಿಸಿದರು ಅಥವಾ ಆಚರಿಸುವುದಕ್ಕೆ ಬಂದಿದ್ದೀರಿ ಅವರು ಕೈ ಎತ್ತಿರಿ. ಬಾಪ್ದಾದಾರವರು ಖುಷಿಯಾಗಿದ್ದಾರೆ. ಚೆನ್ನಾಗಿ ಆಚರಿಸಿರಿ ಆದರೆ ಆಚರಿಸುವುದು ಅರ್ಥಾತ್ ಆಗುವುದು

ಮತ್ತು ಮಾಡುವುದು. ಉತ್ಸವ ಆಚರಿಸುವ ಸಮಯ ತಮಗೆ ತಾವೇ ಅಂಡರ್ಲೈನ್ ಮಾಡಿರಿ ಸದಾ ನೆನಪು ಮತ್ತು ಸೇವೆಯ ಉತ್ಸಾಹದಲ್ಲಿ ರುವಂತಹ ಆತ್ಮನಾಗಿದ್ದೇನೆ. ಬಾಪ್ದಾದಾರವರಿಗೂ ಸಹ ದೃಶ್ಯ ಚೆನ್ನಾಗಿ ಎನಿಸುತ್ತದೆ. ಈ ವರ್ಷ ಬಾಪ್ದಾದಾರವರು ಮಾಯೆಗೆ ವಿದಾಯಿ ಕೊಡುವ ವರ್ಷ ಆಚರಿಸಲು ಬಯಸುತ್ತಾರೆ. ಇಂತಹ ಉತ್ಸವ ಆಚರಿಸುವಿರಲ್ಲವೇ? ನಾಳೆ ಏನು ಆಚರಿಸುವಿರಿ, ಇದೇ ರೀತಿ ಆಚರಿಸುವಿರಲ್ಲವೇ? ಸಿಲ್ವರ್ ಜೂಬಲಿ ಆಚರಿಸುವಿರಲ್ಲವೇ? ಗೋಲ್ಡನ್ ಜೂಬಲಿಯಾಗಿರಲಿ, ಸಿಲ್ವರ್ ಜೂಬಲಿಯಾಗಿರಲಿ ಆದರೆ ಉತ್ಸವವಾಗಿದೆಯಲ್ಲವೇ. ಈ ರೀತಿ ಯೋಚಿಸಬೇಡಿ ನಾವಂತು ಸಿಲ್ವರ್ ಜೂಬಲಿಯವರಾಗಿದ್ದೇವೆ, ಮೊದಲು ಗೋಲ್ಡನ್ನವರು ಆಗಲಿ ನಂತರ ನಾವು ಆಗುವೆವು. ಈ ರೀತಿ ಯೋಚಿಸಬೇಡಿರಿ. ಯಾರು ಆಚರಿಸುವುದಿಲ್ಲ, ಅವರು ಯಾರು ಉತ್ಸವವನ್ನು ಆಚರಿಸುತ್ತಿದ್ದಾರೆ ಅವರಿಗಾಗಿ ಬಾಪ್ದಾದಾರವರು ಹೇಳುತ್ತಿದ್ದಾರೆ ಎಂದು ತಿಳಿದುಕೊಳ್ಳಬೇಡಿ. ಎಲ್ಲರಿಗೂ ಹೇಳುತ್ತಿದ್ದಾರೆ. ಬ್ರಾಹ್ಮಣ ಜೀವನದ ಉತ್ಸವವನ್ನು ಆಚರಿಸಿದ್ದೀರಲ್ಲವೇ! ಬ್ರಾಹ್ಮಣರು ಎಲ್ಲರು ಆಗಿದ್ದೀರಿ ಅಥವಾ ಬ್ರಾಹ್ಮಣರು ಆಗುತ್ತಿದ್ದೀರಿ? ಆಗಿ ಬಿಟ್ಟಿದ್ದೀರಿ. ಬ್ರಾಹ್ಮಣರ ಜನ್ಮದ ಉತ್ಸವ ಆಚರಿಸುವಂತಹ ಆತ್ಮರು ಅರ್ಥಾತ್ ಸದಾ ಉತ್ಸಾಹದಲ್ಲಿರುವುದು ಮತ್ತು ಅನ್ಯರಿಗೂ ಉತ್ಸಾಹದಲ್ಲಿ ತರುವುದು. ಇದೇ ಬ್ರಾಹ್ಮಣರ ಕರ್ತವ್ಯವಾಗಿದೆ. ಆ ಬ್ರಾಹ್ಮಣರಂತು ಮುಖದಿಂದ ಕಥೆಯನ್ನು ಹೇಳುತ್ತಾರೆ, ನೀವು ಬ್ರಾಹ್ಮಣರ ಮುಖದಿಂದಲೂ ಸಹ ಹೇಳುತ್ತೀರಿ ಅಂದಾಗ ಉತ್ಸಾಹ ತುಂಬಲು ಹೇಳುತ್ತೀರಿ. ಯಾವುದೇ ಆತ್ಮನಾಗಿರಲಿ ಭಲೇ ನಿಮ್ಮ ವಿರೋಧಿ ಆತ್ಮನಾಗಿರಲಿ, ಏಕೆಂದರೆ ಲೆಕ್ಕಾಚಾರವು ಇಲ್ಲಿಯೇ ಸಮಾಪ್ತಿಯಾಗಬೇಕಾಗಿದೆ. ಆದರೆ ಯಾವುದೇ ಆತ್ಮರಿರಲಿ ಬ್ರಾಹ್ಮಣರ ಕರ್ತವ್ಯವಾಗಿದೆ ಉತ್ಸಾಹ ಭರಿತ ಕಥೆಯನ್ನು ಹೇಳುವುದು. ಉತ್ಸಾಹದ ಮಾತುಗಳೇ ಹೇಳಿರಿ. ಅವರು ಅಳುತ್ತಿದ್ದರೆ, ನೀವು ಅವರನ್ನು ಉತ್ಸಾಹದಲ್ಲಿ ನೃತ್ಯ ಮಾಡಿಸಿರಿ. ಯಾವಾಗ ಯಾರಾದರೂ ಹೃದಯದಲ್ಲಿ ಉತ್ಸಾಹವಿರುತ್ತದೆ ಅಂದಾಗ ಏನು ಆಗುತ್ತದೆ? ಕಾಲುಗಳು ನೃತ್ಯ ಮಾಡ ತೊಡಗುತ್ತವೆ. ಹೇಗೆ ಈ ಕಾರ್ಯಕ್ರಮ ಮಾಡುತ್ತೀರಲ್ಲವೇ! ಅಂತಿಮದಲ್ಲಿ ಏನು ಮಾಡುತ್ತೀರಿ? ಎಲ್ಲರೂ ನೃತ್ಯ ಮಾಡುತ್ತೀರಲ್ಲವೇ. ಇದಂತು ಕಾಲುಗಳ ನೃತ್ಯವಾಗಿದೆ. ಬ್ರಾಹ್ಮಣ ಆತ್ಮರು ಉತ್ಸಾಹ ತರುವುದು ಮತ್ತು ಉತ್ಸಾಹದಲ್ಲಿರುವುದು ಇಲ್ಲದೇ ಇರಲು ಸಾಧ್ಯವಿಲ್ಲ. ಉತ್ಸಾಹ ಅಳಿಸುವಂತಹ ಮಾತುಗಳಿರುತ್ತವೆ ಮತ್ತು ಇರುವುದು ಆದರೆ ಬಾಪ್ದಾದಾರವರು ಈ ವರ್ಷದಲ್ಲಿ ಎಲ್ಲಾ ಮಕ್ಕಳಿಂದ ಇದೇ ಶುಭ ಆಸೆಯನ್ನಿಟ್ಟುಕೊಳ್ಳುತ್ತಾರೆ ಕಳೆದು ಹೋಗಿದ್ದು ಕಳೆದು ಹೋಯಿತು, ಇಂದಿನವರೆಗೆ ಯಾರೇ ಎಂತಹದ್ದೇ ಆತ್ಮರು ಸಂಬಂಧ-ಸಂಪರ್ಕದಲ್ಲಿ ಇರಲಿ, ಹೇಗೆ ಇರಲಿ, ನಕರಾತ್ಮಕತೆಯು ಇದೆ, ಎದುರಿಸುವಂತಹವರು ಇದ್ದಾರೆ, ಬ್ರಾಹ್ಮಣ ಜೀವನವನ್ನು ಅಲುಗಾಡಿಸುವಂತಹವರು ಇದ್ದಾರೆಆದರೆ ಈ ವರ್ಷದಲ್ಲಿ ನಕರಾತ್ಮಕತೆ ಮತ್ತು ವ್ಯರ್ಥ ದೃಷ್ಟಿಕೋನ ಸಮಾಪ್ತಿ ಮಾಡಿ. ಸ್ನೇಹ ಕೊಡಿ, ಶಕ್ತಿಯನ್ನು ಕೊಡಿ. ಒಂದುವೇಳೆ ಸ್ನೇಹ ಕೊಡಲು ಸಾಧ್ಯವಿಲ್ಲ, ಶಕ್ತಿ ಕೊಡಲು ಸಾಧ್ಯವಿಲ್ಲ ಅಂದಾಗ ನೋಡುತ್ತಾ, ಕೇಳುತ್ತಾ, ಸಂಪರ್ಕದಲ್ಲಿ ಬರುತ್ತಾ ವ್ಯರ್ಥ ಮತ್ತು ನಕರಾತ್ಮಕತೆ ಮಾತುಗಳನ್ನು ಹೃದಯದಲ್ಲಿ ಧಾರಣೆ ಮಾಡುವುದು ತಪ್ಪಿಸಿ. ಮನಸ್ಸು ಮತ್ತು ಬುದ್ಧಿಯಲ್ಲಿ ಧಾರಣೆ ಆಗಬಾರದು, ತಪ್ಪಿಸಿ. ಪರಿವರ್ತನೆ ಮಾಡಿ. ನಕರಾತ್ಮಕತೆಯನ್ನು ಅಥವಾ ವ್ಯರ್ಥವನ್ನು ಪರಿವರ್ತನೆ ಮಾಡಿ ಹೃದಯದಲ್ಲಿ ಸಮಾವೇಶಿಸಿಕೊಳ್ಳಿರಿ. ಇಂತಹ ಎರಡು ಮಾತುಗಳನ್ನು ಯಾರು ಅವೈಡ್ ಮಾಡುತ್ತಾರೆ (ತಪ್ಪಿಸುತ್ತಾರೆ) ಅವರಿಗೆ ಬಾಪ್ದಾದಾರವರ ಮೂಲಕ, ಬ್ರಾಹ್ಮಣ ಪರಿವಾರದ ಮೂಲಕ ಬಹಳ ಒಳ್ಳೆಯದಕ್ಕಿಂತ ಒಳ್ಳೆಯ, ದೊಡ್ಡದಕ್ಕಿಂತ ದೊಡ್ಡ ಪ್ರಶಸ್ತಿ ಸಿಗುತ್ತದೆ. ಬೇರೆ ಆತ್ಮರಿಗೆ ಪ್ರಶಸ್ತಿಯನ್ನು ಕೊಡುವಂತಹ ಆತ್ಮರಿದ್ದಾರೆ. ಪ್ರಶಸ್ತಿ ಸಿಗುತ್ತದೆಯಲ್ಲವೇ? ಇದು ಪರಮಾತ್ಮ ಪ್ರಶಸ್ತಿಯಾಗಿದೆ. ಅವೈಡ್ ಮಾಡಿ, ಅವಾರ್ಡ್ ತೆಗೆದುಕೊಳ್ಳಿರಿ. ಸಾಹಸವಿದೆಯೇ? ಒಳ್ಳೆಯದು.

ಪಾಂಡವರು ಯಾರು ಕಾರ್ಯಕ್ರಮವನ್ನು ಮಾಡಿದರು, ಅವರಲ್ಲಿ ಸಾಹಸವಿದೆಯೇ? ಪ್ರಶಸ್ತಿಯನ್ನು ತೆಗೆದುಕೊಳ್ಳುವಿರಾ? ಎಲ್ಲರು ಕೈ ಎತ್ತಿರಿ, ಇಂದಿನ ದಿನಾಂಕವನ್ನು ಅಂಡರ್ಲೈನ್ (ಗುರುತು) ಮಾಡಿ. ಇಂದು ಏನು ದಿನಾಂಕವಿದೆ? (14 ಡಿಸೆಂಬರ್) ಪ್ರತಿ ತಿಂಗಳಿನ 14ನೇ ದಿನಾಂಕದಂದು ತಮ್ಮನ್ನು ಚೆಕ್ ಮಾಡಿಕೊಳ್ಳಿರಿ. ಒಳ್ಳೆಯದು – ಯಾರೆಲ್ಲಾ ಸಿಲ್ವರ್ ಜೂಬಲಿಯವರು ಪ್ರಶಸ್ತಿಯನ್ನು ತೆಗೆದುಕೊಳ್ಳುವಿರಿ, ಅವರು ಕೈ ಎತ್ತಿರಿ. ಹಾಗೆಯೇ ಎತ್ತಬೇಡಿರಿ. ಸಂಕೋಚದ ಕಾರಣ ಎತ್ತಬೇಡಿ. ಬಾಪ್ದಾದಾರವರು ಅವಕಾಶವನ್ನು ಕೊಡುತ್ತಾರೆ, ಒಂದುವೇಳೆ ಯಾರಲ್ಲಿ ಸಾಹಸವಿಲ್ಲವೆಂದರೆ ಕೈ ಎತ್ತಬೇಡಿರಿ, ಪರವಾಗಿಲ್ಲ. ಬಾಪ್ದಾದಾರವರು ಮತ್ತಷ್ಟು ಸಕಾಶಕೊಡುವರು, ಇಂತಹ ಯಾವುದೇ ಮಾತಿಲ್ಲ. ಇನ್ನೂ ಸ್ವಲ್ಪ ಸಾಹಸ ಬೇಕು ಎನ್ನುವರು ಯಾರಾದರೂ ಇದ್ದೀರಾ? ಯಾರಾದರೂ ಸಿಲ್ವರ್ ಜೂಬಲಿಯ ಟೀಚರ್ಗಳು ಈ ರೀತಿ ಇದ್ದೀರಾ? ಇಲ್ಲಿ ಕೈ ಎತ್ತಿಲ್ಲ, ಸಂಕೋಚವಾಗುತ್ತದೆ ಎಂದರೆ ಬರೆದು ಕೊಡಿ. ಯಾವಾಗ ಕಾರ್ಯಕ್ರಮವನ್ನು ಮಾಡುವಿರಿ ಆಗ ಕೊಡಿ. ನಮಗೆ ಹೆಚ್ಚಿಗೆ (ಎಕ್ಸಟ್ರಾ) ಸಾಹಸ ಬೇಕೆಂದು ತಿಳಿಯುತ್ತಿರೆಂದರೆ ಅವರಿಗಾಗಿ ವಿಶೇಷ ಟ್ಯುಶನ್ ಇಡಲಾಗುವುದು. ಯಾರು ಓದುವುದರಲ್ಲಿ ಬಲಹೀನರಾಗಿರುತ್ತಾರೆ ಅವರು ಏನು ಮಾಡುತ್ತಾರೆ? ಟ್ಯುಶನ್ ಇಡುತ್ತಾರಲ್ಲವೇ? ಒಳ್ಳೆಯದು, ಮಧುಬನದವರು ಕೈ ಎತ್ತಿರಿ, ಎದ್ದು ನಿಲ್ಲಿರಿ. ಮಧುಬನದವರು ಒಳ್ಳೆಯ ಅವಕಾಶವನ್ನು ತೆಗೆದುಕೊಳ್ಳುತ್ತಾರೆ. ಒಳ್ಳೆಯದು. ಮಧುಬನದವರು ಪ್ರಶಸ್ತಿ ತೆಗೆದುಕೊಳ್ಳುವರೇ? ಎಲ್ಲರು ಎತ್ತಿದ್ದೀರಾ? ಟ್ಯುಶನ್ ಬೇಡವೇ? ಬಹದ್ದೂರಾಗಿದ್ದೀರಿ. ಒಳ್ಳೆಯದು - ಬಾಪ್ದಾದಾರವರು ಲೆಕ್ಕವನ್ನು ತೆಗೆದುಕೊಳ್ಳುವರು. ಮಧುಬನದವರಿಗೆ ಶುಭಾಷಯಗಳು.

ಈ ವರ್ಷ ವಿದಾಯಿ ಮತ್ತು ಶುಭಾಷಯದ್ದಾಗಿದೆ ಮತ್ತು ಈ ವರ್ಷದಲ್ಲಿ ಮಕ್ಕಳು ಏನು ವಿಶೇಷ ಸಂಕಲ್ಪವನ್ನು ಮಾಡುತ್ತಾರೆ,

ಅದನ್ನು ಪ್ರಾಕ್ಟಿಕಲ್ನಲ್ಲಿ ತರುವುದಕ್ಕೆ ಬಾಪ್ದಾದಾರವರ ಎಕ್ಸ್ಟ್ರಾ ಸಹಾಯ ಸಿಗುವುದು. ಕೇವಲ ದೃಢವಾಗಿರಿ. ಮಧ್ಯೆ – ಮಧ್ಯೆದಲ್ಲಿ ಡ್ರಾಮಾ ಪೇಪರ್ ತೆಗೆದುಕೊಳ್ಳುವುದು ಆದರೆ ಸಂಕಲ್ಪದಲ್ಲಿ ದೃಢವಾಗಿರಿ. ಸಂಕಲ್ಪ ರೂಪಿ ಕಾಲುಗಳು ಅಲುಗಾಡಬಾರದು, ಅಚಲರಾಗಿರಿ ಆಗ ತಂದೆಯಿಂದ ಎಕ್ಸ್ಟ್ರಾ ಸಹಯೋಗದ ಅನುಭೂತಿಯಾಗುವುದು. ಕೇವಲ ತೆಗೆದುಕೊಳ್ಳುವ ಶಕ್ತಿ ಬೇಕು. ಒಂದು ಬಲ, ಒಂದು ಭರವಸೆ.. ಏನೇ ಆಗಲಿ, ಆಗಲೇ ಬೇಕು. ಈ ಸಂಕಲ್ಪ ರೂಪಿ ಕಾಲು ಬಲಶಾಲಿಯಾಗಿರಬೇಕು. ಮಾತುಗಳು ಬರುವವು ಆದರೆ ನೀವು ವಿಮಾನದಲ್ಲಿ ಮೋಡಗಳು ಕೆಳಗಡೆ ಇರುತ್ತವೆ ಮತ್ತು ಸ್ವಯಂ ಮೋಡಗಳ ಮೇಲೆ ಇರುತ್ತಾರೆ - ಈ ರೀತಿ ಅನುಭವ ಮಾಡುವಿರಿ. ಮೋಡಗಳು ಒಂದು ಮನೋರಂಜನೆಯ ದೃಶ್ಯವಾಗಿ ಬಿಡುತ್ತದೆ. ಇಂತಹ ಎಷ್ಟೇ ಕಪ್ಪು ಮೋಡಗಳಂತಹ ಮಾತುಗಳು ಬರಲಿ, ಯಾವುದರಲ್ಲಿ ಕೆಲ ಸಮಸ್ಯೆಯ ಪರಿಹಾರ ಅಥವಾ ಸಮಾಧಾನ ಆ ಸಮಯದಲ್ಲಿ ಕಾಣಿಸದೇ ಇರಲಿ ಆದರೆ ಈ ದೃಢ ನಿಶ್ಚಯವಿರಲಿ ಈ ಮೋಡಗಳು ಬರುವುದೇ ಹೋಗುವುದಕ್ಕಾಗಿ. ಈ ಮೋಡ ಚೂರುಚೂರಾಗುವುದಿದೆ, ಇರುವುದಿಲ್ಲ. ಇಂತಹ ಹಾರುವ ಕಲೆಯ ಸ್ಟೇಜ್ನಲ್ಲಿ ಸ್ಥಿತರಾಗಿಬಿಡಿ ಆಗ ಎಷ್ಟೇ ಆಳ ಕಪ್ಪು ಮೋಡಗಳು ಚೂರುಚೂರಾಗುವವು ಮತ್ತು ನೀವು ದೃಢತೆಯ ಬಲದಿಂದ ಸಫಲರಾಗಿಯೇ ಇರುವಿರಿ. ಗಾಬರಿಯಾಗಬೇಡಿ, ಇದು ಹೇಗೆ ಆಗುವುದು! ಒಳ್ಳೆಯದೇ ಆಗುವುದು, ಏಕೆಂದರೆ ಬಾಪ್ದಾದಾರವರು ತಿಳಿದುಕೊಂಡಿದ್ದಾರೆ ಎಷ್ಟು ಸಮಯ ಹತ್ತಿರ ಬರುತ್ತಿದೆ ಅಷ್ಟು ಹೊಸ-ಹೊಸ ಮಾತುಗಳು, ಸಂಸ್ಕಾರಗಳು, ಲೆಕ್ಕಾಚಾರದ ಕಪ್ಪು ಮೋಡಗಳು ಬರುತ್ತವೆ. ಇಲ್ಲಿಯೇ ಎಲ್ಲವು ಸಮಾಪ್ತಿಯಾಗಲಿದೆ. ಕೆಲ ಮಕ್ಕಳು ಹೇಳುತ್ತಾರೆ ದಿನ ಪ್ರತಿದಿನ ಮತ್ತಷ್ಟು ಇಂತಹ ಮಾತುಗಳು ಹೆಚ್ಚಾಗುತ್ತವೆ ಏಕೆ? ಯಾವ ಮಕ್ಕಳಿಗೆ ಧರ್ಮರಾಜಪುರಿಯಲ್ಲಿ ಕ್ರಾಸ್ ಮಾಡುವುದಿಲ್ಲ, ಅವರು ಸಂಗಮದ ಈ ಅಂತಿಮ ಸಮಯದಲ್ಲಿ ಸ್ವಭಾವ-ಸಂಸ್ಕಾರದ ಎಲ್ಲಾ ಲೆಕ್ಕಾಚಾರ ಇಲ್ಲಿಯೇ ಸಮಾಪ್ತಿಯಾಗುತ್ತಿದೆ. ಧರ್ಮರಾಜಪುರಿಯಲ್ಲಿ ಬರುವುದಿಲ್ಲ. ನಿಮ್ಮ ಮುಂದೆ ಯಮದೂತರು ಬರುವುದಿಲ್ಲ. ಈ ಮಾತುಗಳೇ ಯಮದೂತರಾಗಿದ್ದಾರೆ, ಯಾವುದು ಇಲ್ಲಿಯೇ ಸಮಾಪ್ತಿಯಾಗಲಿದೆ ಇದಕ್ಕಾಗಿ ರೋಗಗಳು ಹೊರಬಂದು ಸಮಾಪ್ತಿಯಾಗುವ ಲಕ್ಷಣವಾಗಿದೆ. ಈ ರೀತಿ ಯೋಚಿಸಬೇಡಿ ಸಮಯ ಸಮೀಪವಿದೆ ಎಂದು ಕಾಣಿಸುವುದಿಲ್ಲ, ಮತ್ತಷ್ಟು ವ್ಯರ್ಥ ಸಂಕಲ್ಪಗಳು ಹೆಚ್ಚಿಗೆ ಆಗುತ್ತವೆ. ಆದರೆ ಇವು ಸಮಾಪ್ತಿಯಾಗಲು ಹೊರಬರುತ್ತಿವೆ. ಅವರ ಕೆಲಸವಾಗಿದೆ ಬರುವುದು ಮತ್ತು ನಿಮ್ಮ ಕೆಲಸವಾಗಿದೆ ಹಾರುವ ಕಲೆಯ ಮೂಲಕ, ಸಕಾಶದ ಮೂಲಕ ಪರಿವರ್ತನೆ ಮಾಡುವುದು. ಗಾಬರಿಯಾಗಬೇಡಿ. ಕೆಲ ಮಕ್ಕಳ ವಿಶೇಷತೆಯಾಗಿದೆ ಹೊರಗಡೆಯಿಂದ ಗಾಬರಿಯಲ್ಲಿರುವುದು ಕಾಣಿಸುವುದಿಲ್ಲ ಆದರೆ ಒಳಗಡೆ ಮನಸ್ಸು ಗಾಬರಿಯಾಗುತ್ತದೆ. ಹೊರಗಡೆಯಿಂದ ಹೇಳುತ್ತಾರೆ ಇಲ್ಲ-ಇಲ್ಲ, ಏನು ಇಲ್ಲ. ಇದಂತು ಆಗೇ ಆಗುತ್ತದೆ ಆದರೆ ಒಳಗಡೆ ಕುಗ್ಗುತ್ತಿರುತ್ತಾರೆ. ಬಾಪ್ದಾದಾರವರು ಮೊದಲೇ ತಿಳಿಸಿದ್ದರಲ್ಲವೇ ಗಾಬರಿಯಾಗುವಂತಹ ಮಾತುಗಳು ಬರುತ್ತವೆ ಆದರೆ ನೀವು ಗಾಬರಿಯಾಗಬಾರದು. ತಮ್ಮ ಶಸ್ತ್ರಗಳನ್ನು ಬಿಡಬೇಡಿ. ಯಾರು ಗಾಬರಿಯಾಗುತ್ತಾರೆ ಅವರ ಕೈಯಲ್ಲಿ ಇರುವ ವಸ್ತುಗಳು ಬಿದ್ದು ಹೋಗುತ್ತವೆ. ಯಾವಾಗ ಮನಸ್ಸಿನಲ್ಲಿ ಗಾಬರಿಯಾಗುತ್ತಾರೆ ಆಗ ಶಸ್ತ್ರ ಅಥವಾ ಶಕ್ತಿಗಳು ಬಿದ್ದು ಹೋಗುತ್ತವೆ, ಮರ್ಜ್ ಆಗಿ ಬಿಡುತ್ತವೆ. ಅದಕ್ಕಾಗಿ ಗಾಬರಿಯಾಗಬೇಡಿ, ಮೊದಲೇ ಗೊತ್ತಿದೆ. ತ್ರಿಕಾಲದರ್ಶಿಗಳಾಗಿ, ನಿರ್ಭಯರಾಗಿ. ಬ್ರಾಹ್ಮಣರು ಪರಸ್ಪರದಲ್ಲಿ ಸಂಬಂಧದಲ್ಲಿ ನಿರ್ಭಯರಾಗಬಾರದು, ಮಾಯೆಯಿಂದ ನಿರ್ಭಯರಾಗಿರಿ. ಸಂಬಂಧದಲ್ಲಂತು ಸ್ನೇಹ ಮತ್ತು ನಿರ್ಮಾಣವಿದೆ. ಯಾರು ಹೇಗೆ ಇರಲಿ ನೀವು ಹೃದಯದಿಂದ ಸ್ನೇಹವನ್ನು ಕೊಡಿ, ಶುಭ ಬಾವನೆ ಕೊಡಿ, ದಯೆ ತೋರಿಸಿ. ನಿರ್ಮಾಣರಾಗಿ ಅವರನ್ನು ಮುಂದಿಟ್ಟು ಮುಂದೆವರೆಸಿ. ಯಾವುದಕ್ಕೆ ಹೇಳಲಾಗುತ್ತದೆ ಕಾರಣ ರೂಪಿ ನಕರಾತ್ಮಕತೆಯನ್ನು ಸಂಬಂಧ ರೂಪಿ ಸಕರಾತ್ಮಕತೆಯನ್ನಾಗಿ ಮಾಡಿರಿ. ಈ ಕಾರಣ, ಈ ಕಾರಣ.... ಕಾರಣ ಅಥವಾ ಸಮಸ್ಯೆಯನ್ನು ಸಕರಾತ್ಮಕತೆಯ ಸಮಾಧಾನ ಮಾಡಿರಿ.

ಬಾಪ್ದಾದಾರವರಿಗೆ ಒಂದು ಮಾತಿನ ಮೇಲೆ ಕೆಲ ಕೆಲವೊಮ್ಮೆ ನಗು ಬರುತ್ತದೆ. ಗೊತ್ತಿದೆಯೇ ಯಾವ ಮಾತೆಂದು? ಗೊತ್ತಿದೆಯೇ? ಒಂದು ಕಡೆ ಚಾಲೆಂಜ್ ಮಾಡುತ್ತಾರೆ - ಬಾಬಾ ನಾವು ಪ್ರಕೃತಿಜೀತ್ ಆಗುತ್ತೇವೆ. ಪ್ರಕೃತಿಯನ್ನು ಪರಿವರ್ತನೆ ಮಾಡುತ್ತೇವೆ, ಹೀಗೆ ಹೇಳುತ್ತೀರಲ್ಲವೇ? ಪ್ರಕೃತಿಯನ್ನು ಬದಲಾಯಿಸುವಿರಲ್ಲವೇ? ಇಂತಹ ಚಾಲೆಂಜ್ ಮಾಡುವಂತಹವರೇ ಪ್ರಕೃತಿಯನ್ನು ಬದಲಾಯಿಸಲು ಸಾಧ್ಯ. ಆದರೆ ಯಾವಾಗ ಸಂಬಂಧ ಸಂಪರ್ಕದಲ್ಲಿ ಯಾವುದೇ ಮಾತು ಬರುತ್ತದೆ ಆಗ ಅದನ್ನು ಸಮಾಧಾನ ಮಾಡಲು ಸಾಧ್ಯವಿಲ್ಲ. ಪರಿವರ್ತನೆ ಮಾಡಲು ಸಾಧ್ಯವಿಲ್ಲ. ನಗುವ ಮಾತಾಗಿದೆಯಲ್ಲವೇ - ಪ್ರಕೃತಿ ಜಡವಾಗಿದೆ ಅದಕ್ಕೆ ಚಾಲೆಂಜ್ ಆಗಿದೆ ಆದರೆ ಬ್ರಾಹ್ಮಣ ಆತ್ಮರನ್ನು ಪರಿವರ್ತನೆ ಮಾಡುವುದು, ಅದು ಆಗುವುದಿಲ್ಲ. ಮತ್ತೇನು ಯೋಚಿಸುತ್ತಿರಿ? ಅದು ಆಗಲು ಸಾಧ್ಯವಿಲ್ಲ. ಇದು ಆಗುವುದೇ ಇಲ್ಲ. ಆಗುವುದೇ ಇಲ್ಲ, ಬದಲಾಗಲು ಸಾಧ್ಯವಿಲ್ಲವೆಂದಾಗ ಪ್ರಕೃತಿಯನ್ನು ಹೇಗೆ ಬದಲಾಯಿಸುವಿರಿ? ಸ್ವಯಂನ್ನು ಪರಿವರ್ತನೆ ಮಾಡಿಕೊಂಡು ಅನ್ಯರನ್ನು ಪರಿವರ್ತನೆ ಮಾಡಿರಿ. ಅವರು ತಪ್ಪಾಗಿದ್ದಾರೆ. 100% ತಪ್ಪಾಗಿದ್ದಾರೆ. ಆದರೆ ನೀವು ಏನು ಮಾತನ್ನು ಕೊಟ್ಟಿದ್ದೀರಿ? ತಂದೆಯೊಂದಿಗೆ ಏನು ಮಾತನ್ನು ಕೊಟ್ಟಿದ್ದೀರಿ? ಸ್ವ ಪರಿವರ್ತನೆಯಿಂದ ವಿಶ್ವ ಪರಿವರ್ತನೆ ಮಾಡುವಿರಾ? ಈ ಮಾತು ನೆನಪಿದೆಯೇ ಅಥವಾ ಮರೆತು ಹೋಗಿದೆಯೇ? ಎಲ್ಲರು ಹೌದು ಎನ್ನುತ್ತಾರೆ. ಎಂತಹದ್ದೇ ಮಾತಿರಲಿ, ಮಾತುಗಳನ್ನು ಬದಲಾಯಿಸಲು ಸಹಾಯವನ್ನು ಭಲೇ ತೆಗೆದುಕೊಳ್ಳಿರಿ ಆದರೆ ಬದಲಾಯಿಸುವುದೇ ಕಷ್ಟವಾಗಿದೆ, ಈ ಸರ್ಟಿಫಿಕೇಟ್ ಕೊಡಬೇಡಿ. ಯಾರು ನಿಮಗೆ ಸರ್ಟಿಫಿಕೇಟ್ ಕೊಡುವ ಅಧಿಕಾರವನ್ನು ಯಾರು ಕೊಟ್ಟರು? ಈ ರೀತಿ ಯೋಚಿಸುವುದು ಇದು ಆಗುವುದೇ ಇಲ್ಲ, ಸರಿಯಾಗುವುದೇ ಇಲ್ಲ. ಯಾರು ನಿಮ್ಮನ್ನು ಜಡ್ಜ್(ನ್ಯಾಯಾಧೀಶರನ್ನಾಗಿ) ಮಾಡಿದರು? ಹಾಗೆಯೇ ನ್ಯಾಯಾಧೀಶರ ಸೀಟ್ ಮೇಲೆ ಕುಳಿತು ಬಿಡುತ್ತೀರಿ? ಇಲ್ಲವೆಂದರೆ

ವಕೀಲರಾಗುತ್ತೀರಿ, ಬಹಳ ಕಾಯಿದೆ ಕಾನೂನೂ ಹೇಳುತ್ತಾ, ವಾದ-ವಿವಾದ ಮಾಡುತ್ತಾ, ಈ ರೀತಿಯಲ್ಲ ಹೀಗೆ. ಹೀಗೆ ಅಲ್ಲ ಹಾಗೆ. ವಕೀಲರಾಗಬೇಡಿರಿ, ಜಡ್ಜ್‌ಆಗಬೇಡಿರಿ. ಈ ಅಧಿಕಾರವನ್ನು ತಂದೆಯು ಕೊಟ್ಟಿಲ್ಲ, ಯಾರು ನಿಮಿತ್ತರಾಗಿದ್ದಾರೆ ಅವರ ಸಹಯೋಗ ತೆಗೆದುಕೊಳ್ಳಿ. ಆ ನಿಮಿತ್ತ ಆತ್ಮರು ಸಹ ಬಾಪ್ದಾದಾರವರ ಸಲಹೆಯಿಂದ ಮಾಡುತ್ತಾರೆ, ತಮ್ಮ ಮನಮತ ನಡೆಸುವುದಿಲ್ಲ.

ಈ ವರ್ಷದಲ್ಲಿ ಈ ಎಲ್ಲಾ ಮಾತುಗಳು ಸಮಾಪ್ತಿ ಮಾಡಿ ಅರ್ಥಾತ್ ಮನಸ್ಸಿನಿಂದ ಪರಿವರ್ತನೆ ಮಾಡಿ, ಅವೈಡ್ ಮಾಡಿ, ಮೇಲೆ ಕಳುಹಿಸಿದ್ದೀರಿ, ಜವಾಬ್ದಾರಿ ಸಮಾಪ್ತಿಯಾಯಿತು. ಪರಸ್ಪರ ಪರಿವರ್ತನೆಯಾಗಿಲಿಲ್ಲವೆಂದರೆ ನಿಮಿತ್ತ ಆತ್ಮರಿಗೆ ತಲುಪಿಸುವುದು ನಿಮ್ಮ ಕರ್ತವ್ಯವಾಗಿದೆ. ಸ್ವಯಂ ಕಾನೂನನ್ನು ಕೈಯಲ್ಲಿ ತೆಗೆದುಕೊಳ್ಳಬೇಡಿರಿ, ಆಗಲೇ ಪ್ರಶಸ್ತಿಗೆ ಪಾತ್ರರಾಗುವಿರಿ. ಸದಾ ಉತ್ಸಾಹದಲ್ಲಿರಿ ಮತ್ತು ಉತ್ಸಾಹವನ್ನು ಹೆಚ್ಚಿಸಿರಿ, ಇದೇ ಸ್ಮೃತಿಯಲ್ಲಿ ಬಾಪ್ದಾದಾರವರು ಇಮರ್ಜ್ ಮಾಡುತ್ತಿದ್ದಾರೆ. ಯಾವಾಗ ಸ್ವಯಂ ಉತ್ಸಾಹದಲ್ಲಿ ಇರುತ್ತೀರಿ ಆಗ ಎಲ್ಲರನ್ನೂ ಕೈಯಲ್ಲಿ ಕೈ ಅರ್ಥಾತ್ ಮನಸ್ಸಿನ ಸ್ನೇಹದ ಕೈಯಲ್ಲಿ ಕೈ ಹಿಡಿದು ನೃತ್ಯ ಮಾಡುತ್ತೀರಿ, ಖುಷಿಯಾಗುತ್ತೀರಿ. ಸ್ಥೂಲ ಕೈಯಲ್ಲ, ಮನಸ್ಸಿನಿಂದ ಸ್ನೇಹದ ಸಹಯೋಗದ ಕೈ. ಇದಕ್ಕೆ ಕೈಯಲ್ಲಿ ಕೈಹಿಡಿಯುವುದೆಂದು ಹೇಳಲಾಗುತ್ತದೆ. ಸ್ನೇಹ ಏನು ಮಾಡಲು ಸಾಧ್ಯವಿಲ್ಲ, ಇಲ್ಲಿ ಪರಮಾತ್ಮನ ಸ್ನೇಹವಿದೆ, ಪರಮಾತ್ಮನ ಪ್ರೀತಿಯಿದೆ. ಅದೇನು ಮಾಡಲು ಸಾಧ್ಯವಿಲ್ಲ! ಅಸಂಭವ ಬ್ರಾಹ್ಮಣರ ಡಿಕ್ಷನರಿಯಲ್ಲಿ ಇಲ್ಲ. ಉತ್ಸಾಹದವರು ಎಂದು ಯಾವುದೇ ಮಾತಿನಲ್ಲಿ ನಿರಾಶರಾಗುವುದಿಲ್ಲ, ಹೃದಯವಿಧೀರ್ಣರಾಗುವುದಿಲ್ಲ.

ನಾಲ್ಕಾರು ಕಡೆಯ ಪರಮಾತ್ಮನ ಪ್ರೀತಿಯ ಸುಖಮಯಿ, ಆನಂದಮಯ ಉಯ್ಯಾಲೆಯಲ್ಲಿ ತೂಗುತ್ತಿರುವಂತಹವರು, ಲಕ್ಕಿ (ಅದೃಷ್ಟಶಾಲಿ) ಮತ್ತು ಲವಲೀ(ಪ್ರಿಯರು) ಆತ್ಮರಿಗೆ, ಸದಾ ದೃಢ ಸಂಕಲ್ಪದ ಮೂಲಕ ಸಮಾಧಾನ ಸ್ವರೂಪ ಶ್ರೇಷ್ಠ ಆತ್ಮಗಳಿಗೆ, ಪರಮಾತ್ಮನ ಪ್ರಶಸ್ತಿ ತೆಗೆದುಕೊಳ್ಳುವಂತಹ ಯೋಗ್ಯ ಹೀರೋ ಪಾತ್ರಧಾರಿ ಆತ್ಮರಿಗೆ, ಸದಾ ಬಾಪ್ದಾದಾರವರ ಪಾಲನೆಗೆ ರಿಟರ್ನ್ ಕೊಡುವಂತಹ ಬಾಪ್ದಾದಾರವರ ಹೃದಯ ಸಿಂಹಾಸನಾಧಿಕಾರಿ ಆತ್ಮರಿಗೆ, ಬಾಪ್ದಾದಾರವರ ಪದಮಗುಣ, ಕೋಟಿ ಶತಕೋಟಿಗಿಂತಲೂ ಹೆಚ್ಚು ನೆನಪು ಪ್ರೀತಿ ಹಾಗೂ ನಮಸ್ತೆ.

ವರದಾನ: ವರದಾನ: ಪವಿತ್ರತೆಯ ಘನತೆಯ ಮೂಲಕ ಶ್ರೇಷ್ಠ ಜೀವನದ ಹೊಳಪು ತೋರಿಸುವಂತಹ ವಿಶೇಷತಾ ಸಂಪನ್ನ ಭವ

ಬ್ರಾಹ್ಮಣ ಜೀವನದ ವಿಶೇಷತೆಯಾಗಿದೆ ಪವಿತ್ರತೆಯ ಘನತೆ. ಹೇಗೆ ರಾಯಲ್ ಫ್ಯಾಮಿಲಿಯವರ ಮುಖ ಮತ್ತು ಚಲನೆಯಿಂದ ತಿಳಿದುಬರುತ್ತೆ ಇವರು ಯಾವುದೊ ರಾಯಲ್ ಕುಲದವರು ಎಂದು, ಈ ರೀತಿ ಬ್ರಾಹ್ಮಣ ಜೀವನದ ಗುರುತು ಪವಿತ್ರತೆಯ ಹೊಳಪಿನಿಂದ ಆಗುವುದು. ಪವಿತ್ರತೆಯ ಹೊಳಪು ನಡೆ ಮತ್ತು ಮುಖದಲ್ಲಿ ಯಾವಾಗ ಕಂಡು ಬರುವುದೆಂದರೆ ಯಾವಾಗ ಸಂಕಲ್ಪದಲ್ಲಿಯೂ ಅಪವಿತ್ರತೆಯ ಹೆಸರು ಗುರುತು ಸಹ ಇರಬಾರದು. ಪವಿತ್ರತೆ ಕೇವಲ ಬ್ರಹ್ಮಚರ್ಯೆ ವ್ರತ ಅಲ್ಲ ಆದರೆ ಯಾವುದೇ ವಿಕಾರ ಅರ್ಥಾತ್ ಅಶುದ್ಧತೆಯ ಪ್ರಭಾವ ಇರಬಾರದು ಆಗ ಹೇಳಲಾಗುವುದು ವಿಶೇಷತಾ ಸಂಪನ್ನ ಬ್ರಾಹ್ಮಣ ಆತ್ಮ.

ಸ್ಲೋಗನ್: ಸ್ಲೋಗನ್: ಯಾರು ಸ್ವಯಂನ ದರ್ಶನ ಮಾಡುತ್ತಾರೆ ಅವರೇ ಸದಾ ಪ್ರಸನ್ನಚಿತ್ತ, ಸರ್ವ ಪ್ರಾಪ್ತಿಯ ಅಧಿಕಾರಿಯಾಗಿರುತ್ತಾರೆ.

ಅವ್ಯಕ್ತ ಸೈಲೆನ್ಸ್ ನ ಮೂಲಕ ಡಬಲ್ ಲೈಟ್ ಫರಿಶ್ತಾ ಸ್ಥಿತಿಯ ಅನುಭವ ಮಾಡಿ

ಹೇಗೆ ಸಾಕಾರ ರೂಪದಲ್ಲಿ ಒಂದು ವಸ್ತ್ರ ಬದಲಾಯಿಸಿ ಮತ್ತೊಂದು ವಸ್ತ್ರ ಧಾರಣೆ ಮಾಡುತ್ತೀರಿ, ಹಾಗೆಯೇ ಸಾಕಾರ ಸ್ವರೂಪದ ಸ್ಮೃತಿಯನ್ನು ಬಿಟ್ಟು ಕೊನೆ ಫರಿಶ್ತಾ ಸ್ವರೂಪರಾಗಿಬಿಡಿ. ಫರಿಶ್ತೆತನದ ವಸ್ತ್ರ ಸೆಕೆಂಡಿನಲ್ಲಿ ಧಾರಣೆ ಮಾಡಿರಿ. ಈ ಅಭ್ಯಾಸ ಬಹಳ ಸಮಯದಿಂದ ಬೇಕಾಗುತ್ತದೆ ಆಗ ಅಂತಿಮ ಸಮಯದಲ್ಲಿ ಪಾಸ್ ಆಗುವಿರಿ.